ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಕೋಗಿಲೆ ಗಾನ ಇಂಪು; ಮಂತ್ರಿಗಳ ಭಾಷಣ?*



ಜೋಂಪು!

ವೀಣಾ ಆರ್. ಪೈ, ಕಾಸರಕೋಡ
*ಸಾಲ ಯಾವಾಗ ಶೂಲ ಅಲ್ಲ?*
ಖುದ್ದು ಸಿರಿವಂತ ಮಾವನೇ ಶೂರಿಟಿ ಹಾಕಿರುವಾಗ.

ಪ್ರಕಾಶ್ ರಾಜಪ್ಪ, ಹೊಸನಗರ
*ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲಿಯೂ ಇದ್ದಾರೆ. ಅವರು ಇಲ್ಲದ ಕ್ಷೇತ್ರ ಯಾವುದು?*
ಸದ್ಯಕ್ಕಂತೂ ಟಿವಿಯ ಡೋಂಗಿ ಜ್ಯೋತಿಷಿಗಳ ಕ್ಷೇತ್ರ.

ಟಿ.ಎಂ. ಮಾನಪ್ಪ, ಶಿವಮೊಗ್ಗ
*ಹನಿ ಹನಿ ಕೂಡಿದರೆ ಹಳ್ಳ. ಜಡೆ ಜಡೆ ಸೇರಿದರೆ?*
ಚೌರಿ!

ನರಸಿಂಹ ಪೈ, ಹೊನ್ನಾವರ
*ಈಗಿನ ಮನೆಗಳಲ್ಲಿ ಅಗರಬತ್ತಿಗಳಿಗಿಂತ ಸೊಳ್ಳೆಬತ್ತಿಗಳೇ ಹೆಚ್ಚಾಗಲು ಕಾರಣ?*



ದೇವನೊಬ್ಬ, ಸೊಳ್ಳೆ ಹಲವು.

ವಿ. ಹೇಮಂತಕುಮಾರ್, ಬೆಂಗಳೂರು
*ಭೂಮಿಯನ್ನು ಸುತ್ತುವ ಚಂದ್ರನಿಗೂ ಹುಡುಗಿಯ ಹಿಂದೆ ಸುತ್ತುವ ಹುಡುಗನಿಗೂ ವ್ಯತ್ಯಾಸವೇನು?*
ತಿಂಗಳೊಂದರಲ್ಲೇ ಚಂದ್ರ ಬೆಳಗುತ್ತಾನೆ, ಹುಡುಗ ಪಳಗುತ್ತಾನೆ.

ಹಾಡ್ಯ ಬ. ಜಯಾನಂದ, ಮೈಸೂರು
*ಪ್ರಜಾಪ್ರಭುತ್ವದಲ್ಲಿ ಪೀಪಲ್ಸ್ ಕಮಾಂಡ್ ಬದಲಿಗೆ ಹೈ ಕಮಾಂಡ್ ಹೇಗೆ ಬಂತು?*
'ಲೋ' ಎಂದರೂ ಹೆಮ್ಮೆ ಪಟ್ಟು ಹೈ ಮುಂದೆ ಬಾಲ ಆಡಿಸುವ ಲೋ ಲೆವೆಲ್ ದಾಸರಿಂದ.

ಆರತಿ ಘಟಿಕಾರ್, ದುಬೈ
*ಅಗ್ನಿಸಾಕ್ಷಿಯಾಗಿ ಕೈ ಹಿಡಿದು ಆತ್ಮಸಾಕ್ಷಿಯ ನೆಪದಲ್ಲಿ ಮೋಸ ಮಾಡುವ ಗಂಡಂದಿರಿಗೆ ಏನೆನ್ನಬೇಕು?*
ದೇವೇಂದ್ರ ಶಚಿ ಇದ್ದರೂ ಶುಚಿ ಇಲ್ಲದ ಚಾರಿತ್ರ್ಯ ಅವನಿಂದಲೇ ಆರಂಭವಾದದ್ದು.

ಎ. ವೆಂಕಟೇಶ್, ನರಗುಂದ
*ಭಗವಂತ ಇದ್ದಾನೆ ಎನ್ನುತ್ತಾರೆ. ಭಗವತಿ ಇದ್ದಾಳೆ ಎನ್ನುವುದಿಲ್ಲ. ಏಕೆ?*
ಕರೆಂಟಿದೆ ಎನ್ನುತ್ತೇವೆ, ಫ್ಯೂಸಿದೆ ಎನ್ನುವುದಿಲ್ಲ; ಇದೂ ಹಾಗೆಯೇ; ದೇವ ಕರೆಂಟ್, ದೇವಿ ಫ್ಯೂಸ್.

ಬಿದರಹಳ್ಳಿ ಚೆನ್ನವೀರಪ್ಪ, ಹಿರೇಹಡಗಲಿ
*ಸೌಂದರ್ಯ ಮನುಷ್ಯನಲ್ಲಿರುತ್ತದೆಯೋ ಅಥವ ಅವನ ಮಾತಿನಲ್ಲಿರುತ್ತದೆಯೋ?*
ಅವನಿಂದ ನಮಗಾಗುವ ಲಾಭದಲ್ಲಿರುತ್ತದೆ. ನಿರುಪಯುಕ್ತ ಸದಾ ಕುರೂಪಿ.

ಕೆ.ವಿ. ಶಿವಕುಮಾರ್ ಕಾಳೀಹುಂಡಿ, ಮೈಸೂರು
*ಸಮಾಜದ ಅಂಧಕಾರವನ್ನು ಸಂಪೂರ್ಣ ಮುಕ್ತ ಮಾಡುವುದು ಹೇಗೆ ಸಾರ್?*
ಸಮಾಜದ ಮುಖಂಡರಾಗಿ ಟ್ಯೂಬ್‌ಲೈಟ್‌ಗಳ ಬದಲು ಮರ್ಕ್ಯುರಿ ಲೈಟ್‌ಗಳನ್ನು ಆರಿಸುವುದರ ಮೂಲಕ.

ಸುಜ್ಞಾನಾಚಾರ್ಯ ಕೆ.ಪಿ. ಕಲಿಕೆರೆ
*ಲಂಚವಿಲ್ಲದೆ ದೇವಸ್ಥಾನಗಳಲ್ಲಿನ ದೇವರನ್ನೂ ನೋಡಲು ಸಾಧ್ಯವಿಲ್ಲವಲ್ಲಾ....?*
ದೇವಸ್ಥಾನ ಪ್ರೆಸೆಂಟ್ ಅಡ್ರೆಸ್. ಭಕ್ತನ ಮನ ಪರ್ಮನೆಂಟ್ ಅಡ್ರೆಸ್. ಇತ್ತ ಶಿಫ್ಟ್ ಆಗಿರಿ, ಲಂಚ ಉಳಿಸಿರಿ.

ಆರ್. ಮಧುಸೂದನ್, ಹಾಸನ
*ಹುಡುಗಿ ಗ್ರಹಣದ ದಿನ ಹುಟ್ಟಿದ್ದಂತೆ. ಮದುವೆ ಆದರೆ ನನಗೆ ಲಾಭವೋ ನಷ್ಟವೋ?*
ಲಾಭವೇ. ಅವಳು ಹುಟ್ಟಿದ್ದೇ ನಿಮಗಾಗಿ. ರಾಹು ಕೇತುವಿನಂತಹ ಮುಖವನ್ನೇ ಇದುವರೆಗೆ ಅರಸುತ್ತಿದ್ದಳವಳು.

## ಬಹುಮಾನಿತ ಪ್ರಶ್ನೆ

ಕೆ.ಎಂ. ವಿಭೂತಿ, ಹರಿಹರ
*ಆಂಬುಲೆನ್ಸ್‌ಗೆ 108 ಎಂದೇ ಏಕೆ ಕರೆಯಬೇಕು? 1008 ಎಂದು ಕರೆಯಬಹುದಲ್ಲ?*
'ಸಾವಿರದ' ಎನ್ನುವುದು ತಪ್ಪಾಗುತ್ತದೆ; ಕೆಲವೊಮ್ಮೆ ಆಂಬುಲೆನ್ಸ್‌ನಲ್ಲಿ ಹೋಗುವಾಗಲೇ ಸಾವು ಇರುತ್ತದೆ.

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು
*ಜೀವನದಲ್ಲಿ ಬಂದು ಹೋಗದೆ ಇರುವ ಈ ಮೂರು ಯಾವುವು?*
ಈಜು, ರೋಜು, ಗೋಜು.

ಪೇಂಟರ್ ಪಾಪು, ಸಂತೇಮರಹಳ್ಳಿ
*ಒಳ್ಳೆಯ ಕಾರ್ಯ ನೆರವೇರಿಸಲು ಹೋದರೆ ಕಷ್ಟಗಳು ಎದುರಾಗುವುದೇಕೆ?*
ಪ್ರಕೃತಿ ನಿಯಮ; ನೋವಿಲ್ಲದೆ ಹೆರಿಗೆಯಿಲ್ಲ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಭೂಮಿಗೆ ಬಿದ್ದ ಬೀಜ, ಎದೆಗೆ ಬಿದ್ದ ಅಕ್ಷರಗಳಿಂದ ಏನು ಪ್ರಯೋಜನ?*
ಎರಡರದ್ದೂ ಏಕೈಕ ಉದ್ದೇಶ ಬೆಳೆ!

ಎಚ್.ಆರ್. ದೇಸಾಯಿ, ರಾಯಚೂರು
*ಚಂದ್ರ ತನ್ನ ಮುಖದ ಕಲೆಗಳನ್ನು ಮುಚ್ಚಿಕೊಳ್ಳಲು ನಮ್ಮಂತೆ ಏಕೆ ಫೇಸ್‌ಕ್ರೀಂಗಳನ್ನು ಬಳಸುವುದಿಲ್ಲ?*



ಹಚ್ಚಿಕೊಳ್ಳುತ್ತಿದ್ದನೇನೋ... ತನ್ನಳತೆಯ ಕನ್ನಡಿ ಇಲ್ಲವಾದ್ದರಿಂದ ತನಗೆ ಕಲೆಗಳಿರುವುದೇ ಅವನಿಗೆ ತಿಳಿದಿಲ್ಲವಂತೆ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
*ಆಡುವ ಮಾತು ಹೇಗಿರಬೇಕು?*
ಇತರರು ಆಡಿಕೊಳ್ಳದಂತೆ.

■ ರಾಮ್